ಇನ್ನೇನೂ ತೊಂದರೆ ಇಲ್ಲ' ಅಂದ. ನಾಯಕರು ನಿಧಾನವಾಗಿ ಹೊರಗೆ ಬಂದರು. ಅಷ್ಟರಲ್ಲಿ ಜನರ ಓಡಾಟಕ್ಕೆ ಸ್ವಲ್ಪ ನಿರಾತಂಕ ಭಾವ ಬಂದಂತಿತ್ತು. ಅಂಗಡಿಗಳ ಬಾಗಿಲನ್ನು ಕೂಡ ಅರೆಬರೆಯಾಗಿ ತೆರೆದು ವ್ಯಾಪಾರ ನಡೆಸಲಾಗುತ್ತಿತ್ತು. ಒಂದೆರಡು ಪೊಲೀಸು ವ್ಯಾನುಗಳೂ ಅಲ್ಲಿದ್ದವು. ಕಾರ್ಯಕರ್ತರು ಬೀಳಿಸಿಹೋಗಿದ್ದ ಬಾವುಟಗಳು ರಸ್ತೆಯ ದೂಳಿನಲ್ಲಿ ಚೆಲ್ಲಾಡಿದ್ದವು.

ತಮ್ಮ ಮುಕ್ಕಾಲುಪಾಲು ಆಯುಷ್ಯವನ್ನು ಈ ಬಾವುಟಗಳೊಂದಿಗೆ ಕಳೆದಿದ್ದ ನಾಯಕರಿಗೆ ಅವುಗಳನ್ನು ಇಂಥ ದುಸ್ಥಿತಿಯಲ್ಲಿ ನೋಡಬೇಕಾಯಿತಲ್ಲ ಎಂದು ಸಂಕಟವಾಯಿತು. ಒಮ್ಮೆ ಹೀಗೆ ಒಂದು ಜಾಥಾದಲ್ಲಿ ಗಲಾಟೆಯಾಗಿ ಪೊಲೀಸರ ಹೊಡೆತಕ್ಕೆ ಹೆದರಿ ಎಲ್ಲರೂ ಓಡುತ್ತಿದ್ದರೆ ನಾಯಕರ ಗಮನ ಮಾತ್ರ ಮಣ್ಣು ಪಾಲಾಗುತ್ತಿದ್ದ ಬಾವುಟವನ್ನು ಎತ್ತಿಕೊಳ್ಳುವುದರ ಕಡೆಗಿತ್ತು. ಆಗ ಪ್ರಭಾಕರ ರೆಡ್ಡಿ ತಮ್ಮ ತಲೆಯಲ್ಲಿ ಲಾಠಿ ಏಟಿನಿಂದ ಎದ್ದ ಬೋರೆಯನ್ನು ಉಜ್ಜಿಕೊಳ್ಳುತ್ತ, 'ನಾಯಕರೇ ಇಷ್ಟೊಂದು ಮೈ ಮರೆತುಬಿಟ್ರೆ ಹ್ಯಾಗೆ? ನಾವು ಜೀವಂತವಾಗಿ ಇದ್ದರೇನೆ ಅಲ್ವಾ ನಮ್ಮ ಹೋರಾಟ ನಡೆಯೋದು?' ಎಂದು ರೇಗುತ್ತ ತಲೆಯಿಂದ ರಕ್ತ ಸುರಿಯುತ್ತಿದ್ದ ನಾಯಕರನ್ನು ಆಸ್ಪತ್ರೆಗೆ ಸೇರಿಸಿದ್ದರು.

ನಾಯಕರು ನೋಯುತ್ತಿದ್ದ ಮೊಣಕಾಲಿನ ಮಂಡಿಯ ಮೇಲೆ ಕೈಯೂರಿ ಪ್ರಯಾಸದಿಂದ ಬಗ್ಗಿ ಅಲ್ಲಿ ಬಿದ್ದಿದ್ದ ಒಂದೆರಡು ಬಾವುಟಗಳನ್ನು ತೆಗೆದು ಅಂಗಡಿಯೊಂದರ ಕಟ್ಟೆಯ ಮೇಲಿಟ್ಟರು. ಆಗ ಪುಟ್ಟ ಹುಡುಗನೊಬ್ಬ ದೊಡ್ಡ ಗಾತ್ರದ ಪುಸ್ತಕದ ಬ್ಯಾಗನ್ನು ಹೊತ್ತು ಆತುರಾತುರವಾಗಿ ಆ ದಾರಿಯಲ್ಲಿ ಬಂದ. ನಾಯಕರು ಅವನನ್ನು ಕರೆದರು. ಅವನು, 'ಏನು ಅಂಕಲ್?' ಎನ್ನುತ್ತ ಬಂದ. ನಾಯಕರು ಅವನ ಎದೆಯ ಮೇಲಿದ್ದ ಬ್ಯಾಡ್ಜ್ ನೋಡಿದರು. ಯಾವುದೋ ಇಂಗ್ಲಿಷ್ ಸ್ಕೂಲಿನ ಹುಡುಗ. 'ಸ್ಕೂಲಿಲ್ವಾ ಕಂದ' ಎಂದು ಮುದ್ದು ಮುದ್ದಾಗಿದ್ದ ಅವನನ್ನು ಕೇಳಿದರು. 'ಇತ್ತು ಅಂಕಲ್. ಅದೇನೋ ಗಲಾಟೆ ಆಯ್ತಂತಲ್ಲ. ಅದಕ್ಕೇ ಬೇಗ ಮನೆ ಸೇರ್ಕೊಳ್ಳಿ ಅಂತ ಕಳಿಸಿದ್ರು' ಎಂದ ಹುಡುಗ. ಹೊಳೆಯುತ್ತಿದ್ದ ಅವನ ಚೆಂದದ ಕಣ್ಣು ನೋಡಿ ನಾಯಕರಿಗೆ ಖುಷಿಯಾಗಿ ತಮ್ಮಲ್ಲಿನ ಒಂದು ಬಾವುಟವನ್ನು ಅವನಿಗೆ ಕೊಟ್ಟರು. ಅವನು ಬಾವುಟ ಪಡೆದು, 'ಥ್ಯಾಂಕ್ಯೂ ಅಂಕಲ್' ಎನ್ನುತ್ತ ಅದನ್ನು ಮೇಲೆತ್ತಿ ಹಿಡಿದು ಆಡಿಸುತ್ತ ಹೊರಟ. ಅವನಲ್ಲಿರುವ ಬಾವುಟ ನೋಡಿ ಪೊಲೀಸರು ಹೊಡೆದುಬಿಟ್ಟಾರೆಂದು ನಾಯಕರಿಗೆ ಆತಂಕವಾಯಿತು. ತುಂಬಾ ಹೊತ್ತಿನ ತನಕ ಆ ಹುಡುಗ ಹೋಗುವುದನ್ನೇ ನೋಡುತ್ತಿದ್ದು ಅವನು ಕಣ್ಮರೆಯಾದ ಮೇಲೆ ನಿಸೂರಾದರು.

ಆನಂತರ ನಾಯಕರಿಗೆ ತಮ್ಮ ಮಾತ್ರೆಗಳ ಕವರು ಮತ್ತು ದಿನಸಿಯ ಚೀಲ ನೆನಪಾಯಿತು. ಅಲ್ಲಿ ಸುತ್ತೆಲ್ಲ ಕಣ್ಣು ಹಾಯಿಸಿದರು. ಮಾತ್ರೆಗಳ ಕವರು ಎಲ್ಲೂ ಕಾಣಲಿಲ್ಲ. ದಿನಸಿಯ ಚೀಲ ಮಾತ್ರ ರಸ್ತೆಯ ಬದಿಯಲ್ಲಿ ಅಷ್ಟಗಲ ಬಾಯಿ ತೆರೆದುಕೊಂಡು ಅನಾಥ ಶವದಂತೆ ಬಿದ್ದಿತ್ತು. ಅದರ ಮೇಲೆ ಯಾರ್‍ಯಾರೋ ತುಳಿದು ಏನೇನೋ ಹೊಲಸೆಲ್ಲ ಮೆತ್ತಿಕೊಂಡಿತ್ತು. ಆಗ ತಾನೇ ಅಲ್ಲಿಗೆ ಬಂದ ಬಡಕಲು ನಾಯಿಯೊಂದು ಆ ಚೀಲವನ್ನು ಮೂಸುತ್ತಿತ್ತು. ನಾಯಕರು ಕುಂಟುತ್ತ ಅಲ್ಲಿಗೆ ಧಾವಿಸಿ ಬರುವಷ್ಟರಲ್ಲಿ ಅದು ಚೀಲದ ಮೇಲೆ ಉಚ್ಚೆ ಮಾಡಿ ಮುಗಿಸಿತ್ತು.

ಹೀಗೆಲ್ಲ ಆಗಿ ಬೆಳಿಗ್ಗೆ ಮನೆ ಬಿಟ್ಟಿದ್ದ ಅಂದಾನಪ್ಪ ನಾಗರಾಜ ನಾಯಕ್ ಉರುಫ್ ಎ.ಎನ್. ನಾಯಕರು ಮುಖ್ಯ ಬೀದಿಯಿಂದ ಒಂದು ಕಿಲೋಮೀಟರ್ ದೂರದಲ್ಲಿದ್ದ ತಮ್ಮ ಮನೆಗೆ ಹಿಂದಿರುಗಿದಾಗ ಬಹಳ ಹೊತ್ತೇ ಆಗಿಬಿಟ್ಟಿತ್ತು.